ಶ್ರೀ ವಾಟಾಳ್ ನಾಗರಾಜ್: ಅದು ಇನ್ನೂ ಬಂದಿಲ್ಲ. ಖಂಡಿತಾ ಅದು ಬಂದಿಲ್ಲ.

ಶ್ರೀ ಆರ್.ರೋಷನ್ ಬೇಗ್: ಫೆಬ್ರವರಿ ತಿಂಗಳಿನಲ್ಲಿ ಆದೇಶ ಮಾಡಿದ್ದೇವೆ.

ಶ್ರೀ ವಾಟಾಳ್‌ನಾಗರಾಜ್: ನಿಮ್ಮ ಆದೇಶ ಅದು ಇನ್ನೂ ಆದೇಶದ ರೂಪದಲ್ಲಿಯೇ ಇದೆ. ಅದಿನ್ನು ಕಾರ್ಯರೂಪಕ್ಕೆ ಬಂದಿಲ್ಲ.

ಅಧ್ಯಕ್ಷರು: ಫೆಬ್ರವರಿ ತಿಂಗಳ ಕಡೆಯಲ್ಲಿ ಆದೇಶ ಹೊರಡಿಸಿದ್ದಾರೆ. ನಾವು ಮಾರ್ಚಿ ಮೊದಲನೆಯ ವಾರ ಕಳೆದಿದ್ದೇವೆ. ಆದೇಶ ಹೋಗಿ ಬರುವುದಕ್ಕೆ ತಡವಾಗುತ್ತದೆ. ಅದು ಇನ್ನೊಂದು ವಾರದಲ್ಲಿ ಬರುತ್ತದೆ, ನೀವು ಕಾಳಜಿ ಮಾಡಬೇಡಿ.

ಕರಾವಳಿ ತೀರದಲ್ಲಿ ಸರ್ವೆ ಮಾಡಿರುವ ವಿಚಾರ

11 (131)

ಶ್ರೀ ಶಿವಾನಂದನಾಯ್ಕ (ಭಟ್ಕಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಉತ್ತರ ಕನ್ನಡ ಜಿಲ್ಲೆಯ ಕರಾವಳಿಯ ಸಮುದ್ರ ತೀರದಲ್ಲಿ ಕಂದಾಯ ಇಲಾಖೆಯವರು ಸರ್ವೆ ಮಾಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ಸರ್ವೆ ಯಾವ ಕಾರಣಕ್ಕಾಗಿ ಮಾಡಲಾಗುತ್ತಿದೆ?

ಇ. ತೀರ ಪ್ರದೇಶದಲ್ಲಿ ವಾಸಿಸುವುವವರನ್ನು ಅಲ್ಲಿಂದ ಸ್ಥಳಾಂತರಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ. ಬಂದಿದೆ.

ಆ. ಕರಾವಳಿ ತೀರದ ಸಿ.ಆರ್.ಝಡ್ ವಲಯದಲ್ಲಿ ಬರುವ ಪ್ರದೇಶಗಳ ''ಮ್ಯಾನೇಜ್‌ಮೆಂಟ್ ಪ್ಲ್ಯಾನ್'' ನಕಾಶೆಗಳನ್ನು ತಯಾರಿಸುವುದಕ್ಕಾಗಿ ಸ್ಥಳೀಯ ಮೋಜಣಿದಾರರಿಂದ ಸ್ಥಳ ಗುರುತಿಸಲಾಗಿದೆ. ಈ ಕೆಲಸವನ್ನು ಕೇಂದ್ರ:ರಾಜ್ಯ ಸರ್ಕಾರದ ಅರಣ್ಯ ಮತ್ತು ಜೀವಿಶಾಸ್ತ್ರ ಇಲಾಖೆಯ ನಿರ್ದೇಶನದ ಮೇರೆಗೆ ಕೈಗೊಳ್ಳಲಾಗಿದೆ.

ಇ. ಇಲ್ಲ.

ಶ್ರೀ ಶಿವಾನಂದ ನಾಯ್ಕ: ಮಾನ್ಯ ಅಧ್ಯಕ್ಷರೆ, ಮ್ಯಾನೇಜ್‌ಮೆಂಟ್ ಪ್ಲಾನ್ ಏ ತಯಾರು ಮಾಡುತ್ತಿದ್ದಾರೆ. ಆ ಭಾಗದ ಜನರನ್ನು ಎತ್ತಂಗಡಿ ಮಾಡಲಿಕ್ಕೆ ಹೊಸ ಕಟ್ಟಾ

ಕಟ್ಟಲಿಕ್ಕೆ ಅವಕಾಶ ಕೊಡುತ್ತಿಲ್ಲ. ಆ ಭಾಗದಲ್ಲಿನ ರೈತರು ಮತ್ತು ಮೀನುಗಾರರು ಭಯಪೀಡಿತರಾಗಿದ್ದಾರೆ. ತೆಂಗಿನಗಿಡಗಳಿಗೆ ನೀರೂ ಸಹ ಉಣಿಸುತ್ತಿಲ್ಲ. ಕಟ್ಟಡ ಕಟ್ಟಲಿಕ್ಕೆ ಪರ್ಮಿಶನ್ ಕೊಡುತ್ತಿಲ್ಲ. ಸಿ.ಆರ್.ಜಡ್. ಅಂದರೇನು?

ಶ್ರೀ ಬಿ.ಎಸ್.ಬಚ್ಚೇಗೌಡ: ಮಾನ್ಯ ಅಧ್ಯಕರ್ಷೆ, ಮಾನ್ಯ ಸದಸ್ಯರು ಸಿ.ಆರ್.ಜಡ್.ಅಂದರೇನು ಎಂದು ಕೇಳಿದರು. ಅದು ಕೋಸ್ಟಲ್ ರೆಗ್ಯುಲೇಷನ್ ಜೋನ್ ಎಂದು. ಇದರಲ್ಲಿ ಕೇಂದ್ರಸರ್ಕಾರದ ಪರಿಸರ ಇಲಾಖೆ ಮತ್ತು ಅರಣ್ಯ ಇಲಾಖೆಯ ಒಂದು ಆದೇಶ ಮತ್ತು ಸರ್ವೋಚ್ಚ ಮತ್ತು ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಕರಾವಳಿ ಪ್ರದೇಶದಲ್ಲಿ 200 ಮೀಟರ್ ಅಂತರದಲ್ಲಿ ಯಾವುದೇ ರೀತಿಯಲ್ಲಿ ಅಭಿವೃದ್ಧಿ ಮಾಡುವ ಹಾಗೆ ಇಲ್ಲ. ಮತ್ತು ಉಳಿದಂತಹ 300ಮೀಟರ್ ಅಂತರದಲ್ಲಿ ಕೆಲವು ಕಂಡೀಷನ್‌ಗಳನ್ನು ಹಾಕಿ ನಿಯಮಗಳ ಪ್ರಕಾರ ಎನ್.ಒ.ಸಿ.ತೆಗೆದುಕೊಂಡು ಅಭಿವೃದ್ಧಿ ಮಾಡಬೇಕು. ಹೋಟೆಲ್ ಆಗಲಿ ಬೇರೆ ಬೇರೆ ದೃಷ್ಟಿಯಿಂದ ಎಂದು ಇರುವಂತಹ ಒಂದು ವ್ಯವಸ್ಥೆ.

12.00 ಪಿ.ಎಂ

ಇದರಲ್ಲಿ ಸರ್ವೆ ಕಾರ್ಯ ಆಗಿದೆಯೇ ಎಂದು ಕೇಳಿದ್ದಾರೆ. ಸರ್ವೆ ಕಾರ್ಯವನ್ನು ಅಲ್ಲಿನ ಜಿಲ್ಲಾಧಿಕಾರಿಗಳು 1997ರ ಅಕ್ಟೋಬರ್‌ನಲ್ಲಿ ಪ್ರಾರಂಭಿಸಿದರು. ಈ ಸರ್ವೆ ಕಾರ್ಯ ಈಗ ನಡೆಯುತ್ತಾ ಇದೆ. ಅದರಲ್ಲಿ 200 ಮೀಟರ್ ಪ್ರದೇಶದಲ್ಲಿ ಏನು ಇದೆ ಮತ್ತು ಉಳಿದಂಥ 300 ಮೀಟರ್ ಪ್ರದೇಶಗಳಲ್ಲಿ ಏನೇನು ಸ್ಟ್ರಕ್ಚರ್ಸ್ ಬೇರೆ ಬೇರೆ ರೀತಿ ಇದೆ ಎಂಬುದನ್ನು ಒಂದು ನಕಾಶೆ ಮಾಡಿ ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡುವಂಥೆ ವ್ಯವಸ್ಥೆ ಈಗ ನಡೆಯುತ್ತಾ ಇದೆ.

ಶ್ರೀ ಶಿವಾನಂದ ನಾಯ್ಕ: ಅಲ್ಲಿ ಆದೇಶವನ್ನು ಕೊಡುತ್ತಿಲ್ಲ. ಏಕೆ ಕೊಡುತ್ತಿಲ್ಲ, ಅದನ್ನು ಸ್ವಲ್ಪ ತಾವು ಹೇಳಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ: ಅಲ್ಲಿ ನಾವು ಯಾರಿಗೂ ತೆಗೆದು ಬೇರೆ ಕಡೆ ಹಾಕುವಂತಹ ಕೆಲಸ ಮಾಡಿಲ್ಲ. ಸೆಟ್ಲ್‌ಮೆಂಟ್ ಆಗಬೇಕು ಎನ್ನುವ ದೃಷ್ಟಿಯಿಂದ ಏನೂ ಮಾಡಿಲ್ಲ. ಎಲ್ಲೆಲ್ಲಿ ಯಾರ್ಯಾರು ಇದ್ದಾರೆ ಅವರೇ ಇರಬೇಕು, ಏಕೆಂದರೆ ಅಭಿವೃದ್ಧಿ ಮಾಡಬೇಕು ಎನ್ನುವ ದೃಷ್ಟಿಯಿಂದ ಈ ಕಾರ್ಯ ಇದೆ ಅಷ್ಟೇ.

ಅಧ್ಯಕ್ಷರು: ಕರ್ಕಿಯವರೇ, ಇನ್ನೂ ನಾಲ್ಕು ಪ್ರಶ್ನೆಗಳಿವೆ. ಈಗಾಗಲೇ 12 ಗಂಟೆಯಾಯಿತು. ಆದ್ದರಿಂದ ಹತ್ತು ನಿಮಿಷದಲ್ಲಿ ತಾವು ಮುಗಿಸಬೇಕು.

ಡಾ: ಎಂ.ಪಿ.ಕರ್ಕಿ: ಮಾನ್ಯ ಅಧ್ಯಕ್ಷರೆ, ಈ ಸಿ.ಆರ್.ಝಡ್ ಜೋನ್ ಬಗ್ಗೆ ಸರ್ವೆ ನಡೆದಿದೆ. ಇದು ಏಕೆ ನಡೆದಿದೆ ಎಂದು ಜನರಿಗೆ ತಿಳಿಸುತ್ತಿಲ್ಲ. ಸರ್ಕಾರ ಇದನ್ನು

ಜನರಿಗೆ ತಿಳಿಸಿದರೆ ಜನ ಕಂಗಾಲಾಗುವ ಪರಿಸ್ಥಿತಿ ಇಲ್ಲ. ಏಕೆಂದರೆ ನನಗೆ ಗೊತ್ತಿರುವ ಹಾಗೆ ಅಲ್ಲಿ ನಂ: 1, ನಂ: 2, ನಂ: 3, ಎಂದು ಮೂರು ಜೋನ್ ಮಾಡಿದ್ದಾರೆ. ನಂ: 1ರಲ್ಲಿ ಹೈಟೈಡ್‌ನಿಂದ-ಲೋಟೈಡ್ ನಡುವೆ ಇರತಕ್ಕಂಥದ್ದು. ನಂ:2ರಲ್ಲಿ ಹೈಟೈಡ್‌ನಿಂದ 200 ಮೀಟರ್. ಇದನ್ನು ಏಕೆ ಸರ್ವೆ ಮಾಡುತ್ತಾರೆಂದರೆ, ನಂ:2 ಹೈಟೈಡ್‌ನಿಂದ ಡೆವಲಪ್ ಆಗಿರುವ ಪ್ರದೇಶಗಳು ಎಷ್ಟು? ಡೆವಲೆಪ್ ಆಗಿಲ್ಲದೆ ಇರುವಂಥ ಪ್ರದೇಶಗಳು ಎಷ್ಟು ಎಂದು ತಿಳಿದುಕೊಳ್ಳಲು ಮಾಡುತ್ತಿದ್ದಾರೆ. ಡೆವಲೆಪ್ ಆಗಿರುವ ಪ್ರದೇಶಗಳಲ್ಲಿ ಮನೆ ಕಟ್ಟ ಕೊಳ್ಳಲಿಕ್ಕೆ ಅವಕಾಶ ಈಗ ಇದ್ದ ಹಾಗೆ ಇರುವುದಿಲ್ಲ. ನಾನು ಸ್ಟೇಟ್ ಲೆವೆಲ್ ಕಮೀಟಿ ಇದೆ ಎಂದು ತಿಳಿದಿದ್ದೇವೆ, ಡೆವಲೆಪ್ ಆಗಿರುವ ಒಂದು ಸ್ಥಳದಲ್ಲಿ ತಾವು ಮನೆ ಕಟ್ಟಿ ಕೊಡತಕ್ಕಂಥ ಅವಕಾಶ ಮಾಡಿ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಇಲ್ಲದೇ ಹೋದರೆ ಆಶ್ರಯ, ಅಂಬೇಡ್ಕರ್ ಮನೆ ಕೂಡ ಕಟ್ಟುವುದಕ್ಕೆ ಆಗದೇ ಇರತಕ್ಕಂಥ ಸ್ಥಿತಿ ಇದೆ. ಅದಕ್ಕಾಗಿ ಈ ಕಮಿಟಿ ಇದನ್ನು ಪರಾಂಭರಿಸಬೇಕಾಗುತ್ತದೆ. ಇನ್ನು ಎರಡನೆಯದಾಗಿ ಇದಕ್ಕೆ ಸೂಕ್ತವಾಗಿರತಕ್ಕಂಥ ಒಂದು ಪತ್ರಿಕಾ ಹೇಳಿಕೆಯನ್ನು ಕೊಡತಕ್ಕಂಥದ್ದು ಮಾಡಬಹುದೇ ಎನ್ನತಕ್ಕಂಥದ್ದನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಕರ್ಕಿಯವರೆ ತಿಳಿಸಿದ ಹಾಗೆ, 200 ಮೀಟರ್ ಹೈಟೈಡ್ ಜೋನ್ ಮತ್ತು ಅದರಿಂದ ಈಚೆಗೆ 300 ಮೀಟರ್ ಅಂದರೆ 500 ಮೀಟರ್ ಜೋನ್ ನಕಾಶೆ ಮಾಡಿಕೊಡಿ ಎಂದು ಕೇಂದ್ರ ಸರ್ಕಾರ ಪರಿಸರ ಇಲಾಖೆಯನ್ನು ಕೇಳಿದೆ. ಇದರ ಜೊತೆಗೆ ನಮ್ಮ ಸರ್ಕಾರ ಮಾಡಿಕೊಂಡಿರತಕ್ಕಂಥ ರೆಗ್ಯೂಲೇಷನ್ ಪ್ರಕಾರ, ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಸುಪ್ರೀಂ ಕೋರ್ಟ್‌ನ ಆದೇಶದ ಮೇಲೆ ಒಂದು ನಕಾಶೆ ತಯಾರು ಮಾಡಿ ಆ ರೀತಿ ಪ್ಲಾನ್ ಮಾಡಿದ್ದಾರೆ. ಅಲ್ಲಿ ಈಗಾಗಲೇ ಇರುವವರನ್ನು ಬೇರೆ ಕಡೆ ವರ್ಗಾಯಿಸಿಲ್ಲ.

ಡಾ॥ ಎಂ.ಪಿ.ಕರ್ಕಿ: ರಿಪೇರಿ ಮಾಡುವುದಕ್ಕೆ ಮಾತ್ರ ಅವಕಾಶ ಇದೆ. ಹೊಸದಾಗಿ ಕಟ್ಟಡ ಕಟ್ಟಲಿಕ್ಕೆ ಅವಕಾಶವಿಲ್ಲ. ಹಳೆಯ ಮನೆ ತೆಗೆದು ಆಶ್ರಯ ಮನೆ ಕೂಡ ಕಟ್ಟುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಇದರಿಂದಾಗಿ ಬಡವರಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಸರ್ಕಾರ ಇದರ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಅಲ್ಲಿರತಕ್ಕಂಥವರನ್ನು ನಾವು ಅಲ್ಲಿಂದ ತೆರೆವು ಮಾಡುವುದಿಲ್ಲ. ಈಗ ಏನು ಇದ್ದಾರೋ ಅವರನ್ನೇ ನಾವು ಅಲ್ಲಿ ಮುಂದುವರಿಸಿಕೊಂಡು ಹೋಗುತ್ತೇವೆ. ಜೋನಲ್ ರೆಗ್ಯುಲೇಷನ್‌ನಲ್ಲಿರತಕ್ಕಂಥದರ ಪ್ರಕಾರ ಕಾರ್ಪೊರೇಷನ್‌ಗೆ ಮುನಿಸಿಪಾಲಿಟಿಗೆ, ಪರ್ಮಿಷನ್ ಮತ್ತು ಪ್ಲಾನ್ ಕೊಡತಕ್ಕಂಥದ್ದು ನಾಟ್ ರೆವಿನ್ಯೂ ಡಿಪಾರ್ಟ್‌ಮೆಂಟ್. ಅಲ್ಲಿನ ಜೋನಲ್

ರೆಗ್ಯುಲೇಷನ್ ನಗರಸಭೆ, ಮುನಿಸಿಪಾಲಿಟಿ, ಕಾರ್ಪೊರೇಷನ್ ಅವರಿಗೆ ಬರುತ್ತದೆ. ಅವರು ಅಲ್ಲಿ ಅಪ್ಲೈ ಮಾಡಿಕೊಂಡು ಎನ್‌ಓಸಿ, ಪ್ಲಾನ್ ತೆಗೆದುಕೊಂಡು ಮನೆ ಕಟ್ಟಕೊಳ್ಳುವಂಥ ಒಂದು ವ್ಯವಸ್ಥೆ ಇದೆ.

(ಗೊಂದಲ)

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೇ, ಕರಾವಳಿ ನಿಯಂತ್ರಣ ವಲಯ (1) ಕರಾವಳಿ ನಿಯಂತ್ರಣ ವಲಯ (2) ಎಂದು ವಿಂಗಡಣೆ ಮಾಡಿದ್ದಾರೆ. ಎರಡರಲ್ಲಿ ಎಲ್ಲೆಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಬರುತ್ತದೆಯೋ ಎಲ್ಲೆಲ್ಲಿ ಗುಂಪು ಮನೆಗಳು ಬರುತ್ತವೆಯೋ ಅಲ್ಲಿ ಅವುಗಳನ್ನು ಕಟ್ಟುವುದಕ್ಕೆ ಕಾನೂನಿನಡಿಯಲ್ಲಿ ಅವಕಾಶ ಇದೆ. ಈಗಾಗಲೇ ಕರಾವಳಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕರಾವಳಿ ಎರಡರ ವಲಯದಲ್ಲಿ ಬರತಕ್ಕಂಥ ಎಲ್ಲಾ ನಗರಸಭೆ, ಗುಂಪುಮನೆಗಳು ಇದ್ದಲ್ಲಿ ಹಕ್ಕುಪತ್ರ ವಿತರಣೆ ಆಗದೇ ಇರುವುದು ಸರ್ಕಾರದ ಲೋಪದೋಷವಾಗಿದೆ ಎಂದು ನಾನು ಹೇಳಬಯಸುತ್ತೇನೆ. ಕರಾವಳಿ ನಿಯಂತ್ರಣ ವಲಯ (2)ರಲ್ಲಿ ಬರತಕ್ಕಂಥ ಎಲ್ಲಾ ಗುಂಪು ಮನೆಗಳು ಏನಿವೆ ಈಗಾಗಲೇ ಸುಮಾರು 25-30 ವರ್ಷಗಳಿಂದ ಇರತಕ್ಕಂಥ ಮನೆಗಳು ಕಂದಾಯ ಇಲಾಖೆಯ ನಕಾಶೆಯಲ್ಲಿ ಇಲ್ಲ. ಕಳೆದ ಬಾರಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿರುವ ಸಭೆಯಲ್ಲಿ, ಪರಿಸರ ಇಲಾಖೆಯ ಅಧಿಕಾರಿಗಳು ನಕಾಶೆ ಬಿಡಿಸಿ ನೋಡಿದರೆ ಈ ವಿಷಯ ತಿಳಿದು ಬಂದಿದೆ. ಆದ್ದರಿಂದ ಸುಮಾರು 25 ವರ್ಷಗಳಿಂದ ಕರಾವಳಿ ವಲಯದಲ್ಲಿ ಮನೆ ಕಟ್ಟಿಕೊಂಡಿರುವ ಮೀನುಗಾರರು ಯಾರಿದ್ದಾರೆ ಅವರಿಗೆ ಮನೆ ನೀಡಿ. ಈ ವಲಯದಲ್ಲಿ ಬರತಕ್ಕಂಥ ಗುಂಪು ಮನೆಗಳಿಗೆ ಅಸಿತ್ವದಲ್ಲಿರತಕ್ಕಂಥ ಮನೆಗಳಿಗೆ ಹಕ್ಕುಪತ್ರ ಕೊಡಬೇಕು ಎನ್ನುವ ಬೇಡಿಕೆಯನ್ನು ನಾನು ಮುಂದಿಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಅಕ್ರಮ ಕಟ್ಟಡಗಳನ್ನು ಸಕ್ರಮ ಮಾಡುವಂತಹ ಒಂದು ವ್ಯವಸ್ಥೆ ಇದೆ. ಸಿ.ಆರ್.ಝಡ್. ಜೋನ್2ನಲ್ಲಿ ಬರುವಂಥದ್ದು ಅಲ್ಲಿನ ನಗರಸಭೆ, ಪುರಸಭೆ, ಅವರಿಗೆ ಖಾಯಂ ಮಾಡಬೇಕು ಎನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ. ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ ಏನೆಂದರೆ, ಕಂದಾಯ ಇಲಾಖೆಯಲ್ಲಿ ಇರತಕ್ಕಂಥ ಕೆಲಸ ಏನೇನು? ಹಾಲಿ ಇರತಕ್ಕಂಥ ಅವರನ್ನು ತೆರವು ಮಾಡುವುದರ ಬಗ್ಗೆ ಕೇಳಿದ್ದಾರೆ. ತಾವು ಕೇಳಿರತಕ್ಕಂಥದ್ದು ಮನೆಗಳನ್ನು ಕಟ್ಟತಕ್ಕಂಥದ್ದು. ಅದನ್ನು ನಿಯಾಮಾವಳಿಗಳ ಪ್ರಕಾರ ಮಾಡಿಕೊಡುತ್ತೇವೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ: ದಯಮಾಡಿ ಒಂದು ನಿಮಿಷ. ಅಲ್ಲಿ ಸುಮಾರು ಶತಮಾನಗಳಿಂದ ಅಲ್ಲಿ ವಾಸ ಮಾಡಿಕೊಂಡು ಬಂದಿದ್ದಾರೆ... ಸಿ.ಆರ್.ಝಡ್ ಮ್ಯಾನೇಜ್‌ಮೆಂಟ್ ಪ್ಲಾನ್ ಬಗ್ಗೆ ಸ್ವಲ್ಪ ತಿಳಿಸಬೇಕು, ಇದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: ಆಯಿತು, ಇದನ್ನು ಬೇರೆ ರೂಪದಲ್ಲಿ ತರುವುದಕ್ಕೆ ಅವಕಾಶ ಕೊಡುತ್ತೇನೆ.

ಬಾದಾಮಿಯಲ್ಲಿ 110 ಕೆ.ವಿ.ವಿದ್ಯುತ್ ಕೇಂದ್ರ

12 (150)

ಶ್ರೀ ಬಿ.ಬಿ.ಚಿಮ್ಮನ ಕಟ್ಟಿ (ಬಾದಾಮಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿಯಲ್ಲಿ 110 ಕೆ.ವಿ.ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ಯಾವಾಗ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ?

ಆ) ಸದರಿ ಕಾಮಗಾರಿಯು ಈಗ ಯಾವ ಹಂತದಲ್ಲಿದೆ?

ಇ) ನಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಮುಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಬಾದಾಮಿಯಲ್ಲಿ 110 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಯೋಜನೆಗೆ ನವೆಂಬರ್ 93ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ. ಆದರೆ ಪವರ್‌ಫೈನಾನ್ಸ್ ಕಾರ್ಪೊರೇಷನ್ ಸಂಸ್ಥೆಯು ಈ ಯೋಜನೆಗೆ ಜುಲೈ 94ರಲ್ಲಿ ಮಂಜೂರಾತಿಯನ್ನು ನೀಡಿತು.

ಆ) ವಿದ್ಯುತ್ ಉಪಕೇಂದ್ರದ ನಿರ್ಮಾಣವು ಪ್ರಗತಿಯಲ್ಲಿದೆ. ನಿಯಂತ್ರಣ ಕೊಠಡಿಯ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದೆ. ಔಟ್‌ಡೋರ್ ಸ್ಟ್ರಕ್ಚರ್ ನಿರ್ಮಾಣವಾಗಿದೆ. ಪವರ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸುವ ಸಲುವಾಗಿ ಅಡಿಪಾಯ (ಬೆಡ್)ದ ಕೆಲಸ ಮುಗಿದಿದೆ ರಕ್ಷಣಾ ಬೇಲಿಯ ಕೆಲಸ (ಫೆನ್ಸಿಂಗ್ ಕೆಲಸ) ಪ್ರಗತಿಯಲ್ಲಿದೆ. ಕರೆಂಟ್ ಟ್ರಾನ್ಸ್‌ಫಾರ್ಮರ್, ಲೈಟನಿಂಗ್ ಅರೆಸ್ಟರ್ ಐಸೋಲೇಟರ್‌ಗಳಿಗಾಗಿ ಮೌಂಟಿಂಗ್‌ಸ್ಟ್ರಕ್ಚರ್ ನಿಲ್ಲಿಸುವ ಕೆಲಸ ಮುಗಿದಿದೆ. ಸದರೀ ವಿದ್ಯುತ್ ಉಪಕೇಂದ್ರದ ನಿರ್ಮಾಣಕ್ಕೆ ಬೇಕಾಗಿರುವ ಪವರ್ ಟ್ರಾನ್ಸ್‌ಫಾರ್ಮರ್, ಸರ್ಕ್ಯೂಟ್ ಬ್ರೇಕರ್ ಇತ್ಯಾದಿ ಮುಖ್ಯ ವಿದ್ಯುತ್ ಉಪಕರಣಗಳನ್ನು ಸರಬರಾಜು ಮಾಡಲಾಗಿದೆ.

ಕೆರೂರಿನಿಂದ ಬಾದಾಮಿಗೆ ಸುಮಾರು 23 ಕಿ.ಮೀ. ಉದ್ದದ 110 ಕೆ.ವಿ.ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಸದರೀ ವಿದ್ಯುತ್